**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಬೆಂಗಳೂರು**

# ನೋವೆಲ್ ಕರೋನಾ ವೈರಸ್ (ಅಔಗಿಖಆ–19)

## ಪತ್ರಿಕಾ ಪ್ರಕಟಣೆ

**ದಿನಾಂಕ:15.03.2020,** **ಸಮಯ: ಸಂಜೆ 4 ಗಂಟೆ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ 134 ದೇಶ/ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (COVID-2019) 30 ಜನವರಿ 2020ರಂದು ಅಂತರ‍ಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (PHEIC) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11 ಮಾರ್ಚ 2020ರಂದು ವಿಶ್ವ ಆರೋಗ್ಯ ಸಂಸ್ಥೆಯು COVID-19ನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಕ್ರಮಗಳನ್ನು ಎಲ್ಲ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರ‍ಾಷ್ಟ್ರೀಯ ಪ್ರಯಾಣಿಕರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

"ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 6 COVID–19 ಖಚಿತ ಪಟ್ಟು ಅವುಗಳಲ್ಲಿ ಒಂದು ಮರಣ ಸೇರಿ, ವರದಿಯಾಗಿವೆ."

5 COVID-19 ಖಚಿತಪಟ್ಟ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿರುತ್ತದೆ.

ಸಂಗ್ರಹ ವರದಿ ಈ ಕೆಳಗಿನಂತಿದೆ:

| **ಸಂಗ್ರಹ ವರದಿ** | | **15.3.2020** | |
|---|---|---|---|
| **ಚಟುವಟಿಕೆ** | | **ಈ ದಿನ** | **ಸಂಚಿತ** |
| ಅ | ಅವಲೋಕನೆಗಾಗಿ ಪಟ್ಟಿ ಮಾಡಲ್ಪಟ್ಟವರು | 220 | 1877 |
| ಆ | 28 ದಿನಗಳ ಅವಲೋಕನ ಅವಧಿಯನ್ನು ಪೂರ್ಣಗೊಳಿಸಿದವರು | 9 | 322 |
| ಇ | ಮನೆಯಲ್ಲೇ ಪ್ರತ್ಯೇಕವಾಗಿ ಇರಿಸಲ್ಪಟ್ಟವರು | 189 | 1495 |
| ಈ | ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇರಿಸಲ್ಪಟ್ಟವರು | 31 | 56 |
| ಉ | ತಮ್ಮ ದೇಶಕ್ಕೆ ಹಿಂತಿರುಗಿ ಹೋದವರು (ಚೀನಾ ದೇಶದವರು–30.01.2020ರಂದು ಚೀನಾಕ್ಕೆ ಹಿಂತಿರುಗಿದವರು) | 0 | 4 |
| ಊ | ಪರೀಕ್ಷೆ ಮಾಡಲು ಸಂಗ್ರಹಿಸಲಾದ ಒಟ್ಟು ಮಾದರಿಗಳು | 131 | 862 |
| ಋ | ನೆಗೆಟಿವ್ ಎಂದು ವರದಿಯಾದ ಒಟ್ಟು ಫಲಿತಾಂಶಗಳು | 19 | 609 |
| ಎ | ಖಚಿತ ಪಟ್ಟ ಫಲಿತಾಂಶಗಳು | 0 | 6 |

**ನಿಗದಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ :**

| **ನಿಗದಿತ ಆಸ್ಪತ್ರೆಗಳಲ್ಲಿ ಪತ್ಯೇಕವಾಗಿರಿಸಿದ ಜನಗಳ ವಿವರ** | | | | |
|---|---|---|---|---|
| | **ಜಿಲ್ಲೆಯ ಹೆಸರು** | **ಇಂದಿನ ಹೊಸ ಒಳರೋಗಿಗಳು** | **ಇಂದು ಬಿಡುಗಡೆ ಮಾಡಲಾದವರು** | **ಒಟ್ಟು ಪತ್ಯೇಕವಾಗಿರಿಸಿದವರು** |
| ಅ | **ಬೆಂಗಳೂರು** (RGICD) | 4 | 3 | 8 |
| ಆ | **ಬೆಂಗಳೂರು** (ಗುರುತಿಸಲಾದ ಆಸ್ಪತ್ರೆಗಳು) | 9 | 0 | 11 |
| ಇ | **ಹಾಸನ** | 0 | 8 | 0 |
| ಈ | **ದಕ್ಷಿಣ ಕನ್ನಡ** | 9 | 0 | 16 |
| ಉ | **ಬಳ್ಳಾರಿ** | 4 | 0 | 6 |
| ಊ | **ಚಿಕ್ಕಮಗಳೂರು** | 0 | 1 | 1 |
| ಎ | **ಕಲಬುರಗಿ** | 0 | 0 | 4 |
| ಏ | **ಕೊಡಗು** | 0 | 0 | 1 |
| ಐ | **ಉಡುಪಿ** | 0 | 0 | 2 |
| ಒ | **ಬೀದರ್** | 0 | 0 | 2 |

| | | | | |
|---|---|---|---|---|
| ಓ | **ವಿಜಯಪುರ** | 2 | 0 | 2 |
| ಔ | **ಗದಗ** | 2 | 0 | 2 |
| ಕ | **ಧಾರವಾಡ** | 1 | 0 | 1 |
| **ಒಟ್ಟು** | | 31 | 12 | 56 |

ಕರ್ನಾಟಕದಲ್ಲಿ ಈ ದಿನದವರೆಗೆ, **1,11,885** ಪ್ರಯಾಣಿಕರನ್ನು ತಪಾಸಣೆ ಮಾಡಲಾಗಿದೆ. ವಿಮಾನ ನಿಲ್ದಾಣವಾರು ವರದಿಗಳು ಈ ಕೆಳಕಂಡತೆ ಇವೆ.

1) ಕೆಂ.ಅಂ. ವಿಮಾನ ನಿಲ್ದಾಣ, ಬೆಂಗಳೂರು– 78,106 (2,376 ನೆನ್ನೆಯ ತಪಾಸಣೆ)
2) ಮಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ– 28,321 ಪ್ರಯಾಣಿಕರು (358 ನೆನ್ನೆಯ ತಪಾಸಣೆ) ಮಾಡಲಾಗಿದೆ.
3) 5,458 ಪ್ರಯಾಣಿಕರನ್ನು ಮಂಗಳೂರು ಮತ್ತು ಕಾರವಾರ ಕಡಲ ಬಂದರುಗಳಲ್ಲಿ ತಪಾಸಣೆ ಮಾಡಲಾಗಿದೆ.

**104 ಆರೋಗ್ಯ ಸಹಾಯವಾಣಿ (ಕಾಲ್ ಸೆಂಟರ್)** COVID-19 ಕುರಿತ ಕರೆಗಳಿಗಾಗಿ 40 ಆಸನಗಳನ್ನು ಮೀಸಲಿರಿಸಿದೆ. ಇಲ್ಲಿಯವರೆಗೆ 2,110 ಕರೆಗಳನ್ನು ಸ್ವೀಕರಿಸಿ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಗಿದೆ. ನಿನ್ನೆ 2,199 ಕರೆಗಳನ್ನು ಸ್ವೀಕರಿಸಲಾಗಿದೆ. ಮುಂದುವರಿದು, ಹೆಚ್ಚುವರಿ 10 ಆಸನಗಳನ್ನು ಬಾಧಿತ 19 ದೇಶಗಳಿಂದ ಹಿಂತಿರುಗಿರುವ ಮಾಹಿತಿ/ಜೈವಿಕ ತಂತ್ರಜ್ಞಾನ ಉದ್ಯೋಗಿಗಳಿಗೆ ಮೀಸಲಿರಿಸಿ ಅದರಲ್ಲಿ ಅವರ ಆರೋಗ್ಯ ಸ್ಥಿತಿಯನ್ನು ವಿಚಾರಿಸಲಾಗುತ್ತಿದೆ.

**ಇಂದಿನ ವಿಷಯಗಳು:**

- ಮಾನ್ಯ ನ್ಯಾಯಾಧೀಶರು, ಕರ್ನಾಟಕ ಉಚ್ಛನ್ಯಾಯಾಲಯ ಇವರಿಗೆ COVID-19ದ ಸದ್ಯದ ಪರಿಸ್ಥಿತಿ ಮತ್ತು ಕೈಗೊಳ್ಳಲಾಗಿರುವ ಅಗತ್ಯ ಕ್ರಮಗಳ ಬಗ್ಗೆ ವರದಿ ನೀಡಲಾಗಿದೆ.
- P6 (ಖಾತರಿ ಪಟ್ಟ ಪ್ರಕರಣ)ದ ಸಂಪರ್ಕದಲ್ಲಿರುವವರ ಮತ್ತು ಸಮೂಹ ನಿಯಂತ್ರಣ ವಲಯದ 3ಕಿ.ಮೀ ವ್ಯಾಪ್ತಿಯಲ್ಲಿ ಸಮುದಾಯದ ಮೇಲ್ವಿಚಾರಣೆ ಮಾಡಲಾಗುತ್ತಿದೆ ಹಾಗೂ ಬಫರ್ ವಲಯದ 5 ಕಿ.ಮೀ ವ್ಯಾಪ್ತಿಯಲ್ಲಿ ಸರ್ವೇಕ್ಷಣೆ ಮತ್ತು ಆರೋಗ್ಯ ಶಿಕ್ಷಣವನ್ನು ಕೈಗೊಳ್ಳಲಾಗಿದೆ. 56 ಪ್ರಾಥಮಿಕ ಸಂಪರ್ಕದಲ್ಲಿರುವವರು ಮತ್ತು 400 ದ್ವಿತೀಯ ಸಂಪರ್ಕದಲ್ಲಿರುವವರನ್ನು ಗುರುತಿಸಲಾಗಿದೆ. ಆ ಕುಟುಂಬದ 7 ಸದದ್ಯರನ್ನು ಕಲಬುರಗಿಯ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಲಾಗಿದೆ.
- ಅಂತರ್ರಾಷ್ಟ್ರೀಯ ಪ್ರಯಾಣಿಕರ ಸುಲಭ ತಪಾಸಣೆ ಸೌಲಭ್ಯಕ್ಕಾಗಿ ಹೆಚ್ಚುವರಿ ಆರೋಗ್ಯ ತಪಾಸಣೆ ಕೇಂದ್ರಗಳನ್ನು ತೆರೆಯಲಾಗಿದೆ.
- ಪೋಲೀಸ್ ಆಯುಕ್ತರು, ಬೆಂಗಳೂರು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಆರೋಗ್ಯ ಅಧಿಕಾರಿಗಳಿಗೆ ಸಭೆ ನಡೆಸಿ COVID-19 ನಿಯಂತ್ರಣಕ್ಕಾಗಿ ಅನುಷ್ಠಾನಗೊಳಿಸ ಬೇಕಾದ ಎಲ್ಲ ಕ್ರಮಗಳ ಬಗ್ಗೆ ತಿಳಿಸಲಾಯಿತು.

**ಸಾರ್ವಜನಿಕರಿಗೆ ಮನವಿ:** COVID-19 **ೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು. ಹಾಗೂ, ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ, ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ/ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.**

**ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ. ನಾವೆಲ್ಲರೂ ಒಟ್ಟಾಗಿ** COVID-19 **ವಿರುದ್ಧ ಹೋರಾಡೋಣ**

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿವೆ: https://karunadu.karnataka.gov.in/hfw/kannada/Pages/nCov-iec.aspx